ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 132

ಸದಸ್ಯರ ಹೆಸರು : ಶ್ರೀ ಕೆ.ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 02.03.2020

ಉತ್ತರಿಸುವವರು : ಮಾನ್ಯ ಅರಣ್ಯ ಸಚಿವರು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಳ್ತಂಗಡಿ ತಾಲ್ಲೂಕು ನೆರಿಯ ಗ್ರಾಮದ ಸರ್ವೆ ನಂ.144 ಹಾಗೂ 145ರಲ್ಲಿ ಮೀಸಲು ಅರಣ್ಯಗಳ ಅಧಿಸೂಚನೆಗಳ ಆಧಾರದಲ್ಲಿ ಮೀಸಲು ಅರಣ್ಯಗಳ ಗಡಿಯನ್ನು ಗ್ರಾಮದ ನಕ್ಷೆಯ ಮೇಲೆ ಗುರುತಿಸಿ ಪಹಣಿ ಇಂಡೀಕರಿಸುವ ಕುರಿತಂತೆ ಕಛೇರಿ ಪತ್ರ ಸಂಖ್ಯೆ:ಬಿ/ಕಾಯೋಶಿ /ಮೋಜಣಿ/ಸಿಆರ್.14/2017-18 ದಿನಾಂಕ 26.09.2018ಕ್ಕೆ ಸಂಬಂಧಿಸಿದಂತೆ ವಿಸ್ಕೃತ ವರದಿಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು;	ಬೆಳ್ತಂಗಡಿ ತಾಲ್ಲೂಕು ನೆರಿಯ ಗ್ರಾಮದ ಸರ್ವೆ ನಂ:144/145 ರ ಮೋಜಣಿ ಕಾರ್ಯಕ್ಕೆ ಸಂಬಂಧಿಸಿದಂತೆ ಕಂದಾಯ ಇಲಾಖೆಗೆ ಸರ್ಕಾರದ ಪತ್ರ ದಿನಾಂಕ:04.05.2017 ರಲ್ಲಿ ಸಹಾಯಕ ಆಯುಕ್ತರು ಪುತ್ತೂರು ಇವರಿಗೆ ಮತ್ತು ವಲಯ ಅರಣ್ಯ ಅಧಿಕಾರಿ, ಬೆಳ್ತಂಗಡಿ ವಲಯ ಇವರ ಪತ್ರ ದಿನಾಂಕ:19/26.11.2016 ರಲ್ಲಿ ತಹಶೀಲ್ದಾರ್, ಬೆಳ್ತಂಗಡಿ ತಾಲೂಕು ಇವರಿಗೆ ಪತ್ರ ವ್ಯವಹಾರವನ್ನು ನಡೆಸಲಾಗಿರುತ್ತದೆ. ಕಂದಾಯ ಮತ್ತು ಅರಣ್ಯ ಇಲಾಖಾ ವತಿಯಿಂದ ಜಂಟಿ ಸರ್ವೆ ಮಾಡಿ ದಿನಾಂಕ:24.01.2018ರಂದು ತಹಶೀಲ್ದಾರ್, ಬೆಳ್ತಂಗಡಿರವರು ವರದಿಯೊಂದಿಗೆ ಸಲ್ಲಿಸಿದ ನಕಾಶೆಗೂ ಚಾರ್ಮಾಡಿ-ಕನಪ್ಪಾಡಿ ಮೀಸಲು ಅರಣ್ಯ, ಧರ್ಮಸ್ಥಳ-ಮುಂಡಾಜೆ ಮೀಸಲು ಅರಣ್ಯ ವಿಸ್ತರಿತ ಬ್ಲಾಕ್- IV & V ಮೀಸಲು ಅರಣ್ಯಗಳ ಅಧಿಸೂಚನೆ, ಸರ್ವೆ ಸೆಟಲ್‌ಮೆಂಟ್ ರಿಜಿಸ್ಟರ್ ನಲ್ಲಿ ನಮೂದಾಗಿರುವ ಹಾಗೂ ಕೈಬರಹದ ಆರ್.ಟಿ.ಸಿ ಯಲ್ಲಿನ ವಿಸ್ತೀರ್ಣಕ್ಕೂ, ತದನಂತರದಲ್ಲಿ ಬಂದ ಕಂಪ್ಯೂಟರೀಕೃತ ಆರ್.ಟಿ.ಸಿ ಯಲ್ಲಿನ ವಿಸ್ತೀರ್ಣಕ್ಕೂ ಮತ್ತು ಇತ್ತೀಚಿನ ಆರ್.ಟಿ.ಸಿ ಯಲ್ಲಿನ ವಿಸ್ತೀರ್ಣಕ್ಕೂ ಒಂದಕ್ಕೊಂದು ತಾಳೆಯಾಗದೇ ಇರುವುದರಿಂದ ಅಧಿಸೂಚನೆಯನುಸಾರ ಮೋಜಣಿ ಮಾಡುವ ಅಗತ್ಯತೆ ಇರುತ್ತದೆ. ಈ ಕುರಿತು ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ, ಶಿವಮೊಗ್ಗ ಇವರು ತಮ್ಮ ಪತ್ರ ದಿನಾಂಕ: 26.09.2018ರಂದು ಜಂಟಿ ಮೋಜಣಿ ಮಾಡಲು ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿರುತ್ತಾರೆ.
ಆ)	ಈ ಕುರಿತಂತೆ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಮೇಲೆ ವಿವರಿಸಿದಂತೆ ಸ್ಥಳದಲ್ಲಿ ಪರಿಶೀಲಿಸಲಾದ ಅರಣ್ಯ ಪ್ರದೇಶದ ವಿಸ್ತಾರಕ್ಕೂ ಮತ್ತು ಅಧಿಸೂಚನೆಯಲ್ಲಿರುವ ಹಾಗೂ ಕಛೇರಿ ದಾಖಲೆಗಳ ವಿಸ್ತಾರಕ್ಕೂ ಒಂದಕ್ಕೊಂದು ತಾಳೆಯಾಗದೇ ಇರುವುದರಿಂದ Forest Survey of India ಸಂಸ್ಥೆಯ ವತಿಯಿಂದ ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆಗಳ ಸಹಕಾರದೊಂದಿಗೆ

		ಮೋಜಣಿ ಮಾಡಲು ಅಗತ್ಯವಿರುತ್ತದೆ. ಈ ಕುರಿತು ದಿನಾಂಕ: 20.01.2020 ರಂದು Forest Survey of India ಸಂಸ್ಥೆಗೆ ಈಗಾಗಲೇ ಪತ್ರ ವ್ಯವಹಾರ ಮಾಡಿ, ಮೋಜಣಿ ಮಾಡಿಕೊಡಲು ಅರಣ್ಯ ಇಲಾಖೆಯಿಂದ ಕೋರಲಾಗಿದೆ.
ಈ)	ಈ ರಕ್ಷಿತಾರಣ್ಯದ ಜಂಟಿ ಸರ್ವೆ ಕಾರ್ಯ ನಡೆದಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು)	ಕಂದಾಯ ಮತ್ತು ಅರಣ್ಯ ಇಲಾಖಾ ವತಿಯಿಂದ ದಿನಾಂಕ:24.01.2018 ರಂದು ಮಾಡಿರುವ ಜಂಟಿ ಮೋಜಣಿಯನ್ನು ಸ್ಥಳದಲ್ಲಿರುವ ಅರಣ್ಯ ಗುಪ್ಪೆಗಳನುಸಾರ ಮಾಡಿದ್ದು, ಅಧಿಸೂಚನೆಯನ್ವಯ ಮಾಡಿರುವುದಿಲ್ಲ. ಅರಣ್ಯ ಪ್ರದೇಶದ ಅಧಿಸೂಚನೆಯ ವಿಸ್ತಾರಕ್ಕೂ ಮತ್ತು ಕಛೇರಿಯಲ್ಲಿರುವ ದಾಖಲೆಗಳ ವಿಸ್ತಾರಕ್ಕೂ ಒಂದಕ್ಕೊಂದು ತಾಳೆಯಾಗದೇ ಇರುವುದರಿಂದ, Forest Survey of India ಸಂಸ್ಥೆಯ ವತಿಯಿಂದ ಅಧಿಸೂಚನೆಯನ್ವಯ ಮೋಜಣಿ ಕಾರ್ಯವನ್ನು ಕೈಗೊಳ್ಳಲು ಈಗಾಗಲೇ ಅರಣ್ಯ ಇಲಾಖೆಯು ಕೋರಲಾಗಿರುತ್ತದೆ.
ಇ)	ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಅಕ್ರಮ-ಸಕ್ರಮ ಅರ್ಜಿ ವಿಲೇವಾರಿ ಯಾವ ಹಂತದಲ್ಲಿದೆ. ಇದರಲ್ಲಿ ಡೀಮ್ಡ್ ಫಾರೆಸ್ಟ್ ಎಂದು ನಮೂದಾಗಿರುವ ಅರ್ಜಿಯ ಕುರಿತಂತೆ ಫಲಾನುಭವಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅರ್ಜಿ ವಿಲೇವಾರಿ ಕುರಿತಂತೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಸರ್ಕಾರದ ಆದೇಶ ಸಂಖ್ಯೆ: ಕಂಇ 46 ಎಲ್‌ಜಿಎ 2019 ದಿನಾಂಕ: 24.01.2020ರಂದು ಅಕ್ರಮ-ಸಕ್ರಮ ಸಮಿತಿಯು ರಚಿತವಾಗಿರುತ್ತದೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ ಅಕ್ರಮ-ಸಕ್ರಮ ಅರ್ಜಿಗಳನ್ನು ನಿಯಮಾನುಸಾರ ತನಿಖೆ ಮಾಡಿ, ಬಗರ್ ಹುಕುಂ ಸಮಿತಿಯ ಮುಂದೆ ಮಂಡಿಸಲಾಗುವುದು. ಡೀಮ್ಡ್ ಫಾರೆಸ್ಟ್‌ರಡಿಯಲ್ಲಿ ಯಾವುದಾದರೂ ಪ್ರದೇಶಗಳಿದ್ದಲ್ಲಿ ಅರಣ್ಯ ಇಲಾಖೆಯ ಅಭಿಪ್ರಾಯ ಪಡೆಯಲಾಗುವುದೆಂದು ಕಂದಾಯ ಇಲಾಖೆಯು ತಿಳಿಸಿರುತ್ತದೆ.

29/02/2020

(ಆನಂದ್ ಸಿಂಗ್)

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು